C.R.P.67

Form No.4 (Civil)
Deposition Sheets
(R.P.No.57)

**6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ ಸಂಖ್ಯೆ: 186/2021**

**ಪ್ರಾಸಾ. 1 ಚಾಸಾ. 1**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಚಾಂದ್ ಪಾಷಾ |
| **ತಂದೆ ಹೆಸರು** | : | ಮೊಹಮದ್ ಯೂಸುಫ್ |
| **ವಯಸ್ಸು** | : | 48 ವರ್ಷಗಳು |
| **ಉದ್ಯೋಗ** | : | ಆಟೋ ಚಾಲಕ |
| **ವಾಸ** | : | ಕೆ.ಆರ್. ಸಿಟಿ ಮಾರ್ಕೇಟ್, ಬೆಂಗಳೂರು. |

**ಪ್ರಮಾಣ ವಚನ ಬೋಧಿಸಿದ ದಿನಾಂಕ: 26.02.2024**

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನ್ಯಾಯಾಲಯದ ಮುಂದೆ ವಿ.ಸಿ. ಮುಖಾಂತರ ಹಾಜರಿರುವ ಆರೋಪಿ ನನಗೆ ಗೊತ್ತು. ಚಾಸಾ-2 ರಿಂದ 7 ರವರು ಗೊತ್ತು.

2. ಸುಮಾರು 3 ವರ್ಷಗಳ ಹಿಂದೆ ಸುಭಾಷ ನಗರದಲ್ಲಿ ಚಾಸಾ-7 ರವರಿಗೆ ಸೇರಿದ ಬಾಡಿಗೆ ಮನೆಯಲ್ಲಿ ನಾನು ಮತ್ತು ನನ್ನ ಹೆಂಡತಿ ಶಾಹೀನ್ ತಾಜ್ ವಾಸ ಮಾಡಿಕೊಂಡಿದ್ದೇವು. ಆ ಸಮಯದಲ್ಲಿ ನಾನು ಆಟೋ ಓಡಿಸುತ್ತಿದ್ದೆ. ಘಟನೆ ನಡೆಯುವ ಮುನ್ನಚಾಸಾ-7 ರವರ ಮನೆಯಲ್ಲಿ ಸುಮಾರು 6 ವರ್ಷಗಳ ಕಾಲ ವಾಸಮಾಡಿಕೊಂಡಿದ್ದೆ. ನಾವು ಚಾಸಾ-7 ರವರ ಮನೆಯಲ್ಲಿ ವಾಸಮಾಡುತ್ತಿದ್ದಾಗ, ನಮ್ಮ ಪಕ್ಕದ ಮನೆಯಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿ ವಾಸ

ಮಾಡುತ್ತಿದ್ದ. ಆ ಸಮಯದಲ್ಲಿ ನನ್ನ ಹೆಂಡತಿ ಶಾಹೀನ್ ತಾಜ್ ಒಂದು ಚಿಲ್ಲರೆ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದಳು. ನನ್ನ ಹೆಂಡತಿ ಶಾಹೀನ್ ತಾಜ್ ಈಗ ಮೃತ ಪಟ್ಟಿರುತ್ತಾಳೆ.

3. ಸುಮಾರು ಎರಡು ವರ್ಷಗಳ ಹಿಂದೆ ನಾನು ಮಾರ್ಕೇಟ್ ಗೆ ಕೆಲಸಕ್ಕೆ ಹೋಗಿದ್ದೆ. ಆ ಸಮಯದಲ್ಲಿ ನನ್ನ ಹೆಂಡತಿ ಶಾಹೀನ್ ತಾಜ್ ಮನೆಯಲ್ಲಿಯೇ ಇದ್ದಳು. ನಾನು ಕೆಲಸ ಮುಗಿಸಿಕೊಂಡು ಬೆಳಗ್ಗೆ 10.30 ಕ್ಕೆ ಮನೆಗೆ ವಾಪಸ್ಸು ಬಂದೆ. ನಾನು ಮನೆಗೆ ಬಂದು ನೋಡಿದಾಗ, ಮನೆಯ ಬಾಗಿಲು ತೆರೆದಿತ್ತು, ಬಾಗಿಲು ಹಾಕಿರಲಿಲ್ಲ, ನಾನು ಮನೆಯ ಒಳಗಡೆ ಹೋಗಿ ನೋಡಿದಾಗ, ನನ್ನ ಹೆಂಡತಿ ಶಾಹೀನ್ ತಾಜ್ ಹಾಸಿಗೆಯ ಮೇಲೆ ಅಂಗಾತವಾಗಿ ಮಲಗಿದ್ದಳು. ನಾನು ನನ್ನ ಹೆಂಡತಿಯನ್ನು ಕೂಗಿದೇ, ಆದರೆ ಆಕೆ ಎದ್ದೇಳಲಿಲ್ಲ. ನಾನು ನನ್ನ ಹೆಂಡತಿಯನ್ನು ನೋಡಿದಾಗ, ಆಕೆಯ ಕುತ್ತಿಗೆ ಮತ್ತು ಗದ್ದದ ಹತ್ತಿರ ಚಾಕುವಿನಿಂದ ಕುಯ್ದುರುವ ಗಾಯಗಳಾಗಿತ್ತು. ನಾನು ನನ್ನ ಹೆಂಡತಿಯ ದೇಹವನ್ನು ಮುಟ್ಟಿ ನೋಡಿದಾಗ ದೇಹ ತನ್ನಗಾಗಿತ್ತು. ಆಗ ನನ್ನ ಹೆಂಡತಿ ಸತ್ತು ಹೋಗಿರಬಹುದು ಎಂದು ಗೊತ್ತಾಯಿತು. ನಂತರ ನಮ್ಮ ಮನೆಯ ಹತ್ತಿರ ಇರುವ ವೈದ್ಯರಿಗೆ ಹೋಗಿ ವಿಚಾರ ತಿಳಿಸಿದೆ. ವೈದ್ಯರು ನಮ್ಮ ಮನೆಗೆ ಬಂದು, ನನ್ನ ಹೆಂಡತಿಯನ್ನು ಪರೀಕ್ಷಿಸಿ ಆಕೆ ಸತ್ತು ಹೋಗಿರುತ್ತಾಳೆ ಎಂದು ತಿಳಿಸಿದರು. ನಂತರ ವಿಚಾರವನ್ನು ನನ್ನ ಅಕ್ಕಪಕ್ಕದ ಮನೆಯವರಿಗೆ ತಿಳಿಸಿದೆ. ನಂತರ ನಾನು ಪೊಲೀಸರಿಗೆ ಕರೆ ಮಾಡಿ ಸದರಿ ವಿಚಾರವನ್ನು ತಿಳಿಸಿದೆ.

4. ನಂತರ ನಾನು ರಾತ್ರಿ 11.00 ಗಂಟೆಗೆ ಪೊಲೀಸರಿಗೆ ದೂರು ನೀಡಿರುತ್ತೇನೆ. ದೂರನ್ನು ನೋಡಿದರೆ ಗುರುತಿಸಬಲ್ಲೆ. ಈಗ ತೋರಿಸಿದ ಸದರಿ ದಾಖಲೆ ದೂರು ಆಗಿರುತ್ತದೆ. ಅದನ್ನು ನಿಶಾನೆ ಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ-1(ಎ)ಎಂದು ಗುರುತಿಸಲಾಯಿತು. ನನ್ನ ಹೆಂಡತಿ ಶಾಹೀನ್ ತಾಜ್ ಫೋಟೋಗಳನ್ನು ನೋಡಿದರೆ ಗುರುತಿಸಬಲ್ಲೆ. ಈಗ ತೋರಿಸಿದ ಮೂರು ಫೋಟೋಗಳಲ್ಲಿ ಕಾಣುವ ಶವ ನನ್ನ ಹೆಂಡತಿ ಶಾಹೀನ್ ತಾಜ್‌ರವರದ್ದಾಗಿರುತ್ತದೆ. ಸದರಿ ಫೋಟೋಗಳನ್ನು ನಿಶಾನೆ ಪಿ-2 ರಿಂದ 4 ಎಂದು ಗುರುತಿಸಲಾಯಿತು.

5. ನಂತರ ಪೊಲೀಸರವರು ನನ್ನ ಹೆಂಡತಿಯ ಮೃತದೇಹವನ್ನು ಸೆಂಟ್ ಜಾನ್ ಆಸ್ಪತ್ರೆಗೆ ತೆಗೆದುಕೊಂಡು ಹೋದರು. ನಂತರ ಪೊಲೀಸರವರು ಬೆಳಗ್ಗೆ 10.00 ಗಂಟೆಗೆ ನನ್ನನ್ನು ಸೆಂಟ್ ಜಾನ್ ಆಸ್ಪತ್ರೆಗೆ ಕರೆಸಿದ್ದರು. ನಾನು ಆಸ್ಪತ್ರೆಗೆ ಹೋದಾಗ ಪೊಲೀಸರವರು ನನಗೆ ನನ್ನ ಹೆಂಡತಿಯ ಶವವನ್ನು

ತೋರಿಸಿ, ನನ್ನ ಹೆಂಡತಿಯ ಕಿವಿಯಲ್ಲಿದ್ದ ಓಲೆಗಳನ್ನು ಕಳಚಿ ನನಗೆ ನೀಡಿದರು. ನನ್ನ ಹೆಂಡತಿಯ ಮೃತ ದೇಹದ ಮೇಲೆ ಬಟ್ಟೆಗಳು ಇದ್ದವು. ನನ್ನ ಹೆಂಡತಿಯ ಕತ್ತಿನ ಹತ್ತಿರ ಚಾಕುವಿನಿಂದ ಕುಯ್ದು ಗಾಯಗಳು ಆಗಿದ್ದವು. ಆಸ್ಪತ್ರೆಯಲ್ಲಿ ಚಾಸಾ-4 ಮತ್ತು ಇನ್ನೂ ನಾಲ್ಕು ಜನ ಇದ್ದರು. ಮೃತ ದೇಹ ನನ್ನ ಹೆಂಡತಿಯೆಂದು ನಾನೇ ಗುರುತಿಸಿರುತ್ತೇನೆ. ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಶವ ಪಂಚನಾಮೆಯ ಸಮಯದಲ್ಲಿ ಫೋಟೋಗಳನ್ನು ತೆಗೆದಿರುತ್ತಾರೆ. ಈಗ ತೋರಿಸಿದ ಫೋಟೋಗಳು ಶವ ಪಂಚನಾಮೆಯಲ್ಲಿ ತೆಗೆದ ಫೋಟೋಗಳಾಗಿರುತ್ತವೆ. ಸದರಿ ಫೋಟೋಗಳನ್ನು ನಿಶಾನೆ ಪಿ-5 ರಿಂದ 7 ಎಂದು ಗುರುತಿಸಲಾಯಿತು. ಫೋಟೋದಲ್ಲಿ ನಾನು ಮತ್ತು ಪೊಲೀಸರು ಇದ್ದೇವೆ. ನಿಶಾನೆ ಪಿ-5 ಫೋಟೋದಲ್ಲಿ ಕಾಣುವ ಇಬ್ಬರೂ ಮಹಿಳೆಯರು ಮೃತೆಯ ಸಂಬಂಧಿಕರು ಆಗಿರುತ್ತಾರೆ.

6. ಶವ ಪಂಚನಾಮೆಯ ನಂತರ ಪೊಲೀಸರವರು ಮರಣೋತ್ತರ ಪರೀಕ್ಷೆಗಾಗಿ ಶವವನ್ನು ವೈದ್ಯರಿಗೆ ನೀಡಿದರು. ಮರಣೋತ್ತರ ಪರೀಕ್ಷೆ ಆದ ಮೇಲೆ ಪೊಲೀಸರವರು ಶವವನ್ನು ನನಗೆ ನೀಡಿದರು. ನಂತರ ನಾನು ಶವವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಮಣ್ಣು ಮಾಡಿರುತ್ತೇನೆ.

**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಮುಂದಿನ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.